# www.karunaduexams.com

ಕೆ.ಎ.ಎಸ್ (KAS) ಪ್ರಶ್ನೋತ್ತರಗಳು8

www.karunaduexams.com

1. ____ ಹೆಕ್ಟೆರ್ ವರೆಗಿನ ಕೃಷಿ ಅಚ್ಚುಕಟ್ಟು ಪ್ರದೇಶ ಇರುವ ನೀರಾವರಿ ಕಾಮಗಾರಿಗಳ ಪ್ರದೇಶವನ್ನು ಸಣ್ಣ ನೀರಾವರಿ ಪ್ರದೇಶವೆಂದು ವಿಂಗಡಿಸಲಾಗಿದೆ?

   ಅ) 2000

   ಆ) 1500

   ಇ) 3000

   ಈ) 4000

   2000

   2000 ಹೆಕ್ಟೆರ್ ವರೆಗಿನ ಕೃಷಿ ಅಚ್ಚುಕಟ್ಟು ಪ್ರದೇಶ ಇರುವ ನೀರಾವರಿ ಕಾಮಗಾರಿಗಳ ಪ್ರದೇಶವನ್ನು ಸಣ್ಣ ನೀರಾವರಿ ಪ್ರದೇಶವೆಂದು ವಿಂಗಡಿಸಲಾಗಿದೆ.

2. ರಾಜ್ಯದ ಅರಣ್ಯ ಪ್ರದೇಶದ ವರ್ಗೀಕರಣದಲ್ಲಿ ಅತಿ ಹೆಚ್ಚು ಪಾಲನ್ನು ಹೊಂದಿರುವ ಅರಣ್ಯ ಪ್ರದೇಶ _______?

   ಅ) ಕಾಯ್ದಿರಿಸಲಾದ ಅರಣ್ಯ

   ಆ) ಸಂರಕ್ಷಿತ ಅರಣ್ಯ

   ಇ) ಗ್ರಾಮೀಣ ಅರಣ್ಯ

   ಈ) ಅವರ್ಗೀಕೃತ ಅರಣ್ಯ

   ಕಾಯ್ದಿರಿಸಲಾದ ಅರಣ್ಯ

   ರಾಜ್ಯದ ಒಟ್ಟಾರೆ ಭೌಗೋಳಿಗ ಅರಣ್ಯ ಪ್ರದೇಶದ ವಿಸ್ತೀರ್ಣದಲ್ಲಿ ಕಾಯ್ದಿರಿಸಲಾದ ಅರಣ್ಯ ಪ್ರದೇಶ ಶೇ 15.5% ಪಾಲನ್ನು ಹೊಂದಿದೆ. ನಂತರದ ಸ್ಥಾನದಲ್ಲಿ ಸಂರಕ್ಷಿತ ಅರಣ್ಯ ಹಾಗೂ ಗ್ರಾಮೀಣ ಅರಣ್ಯ ಪ್ರದೇಶ ಕಾಣಬಹುದು.

3. ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆ ಯಾವುದು?

   ಅ) ಚಿಕ್ಕಮಗಳೂರು

   ಆ) ಉಡುಪಿ

   ಇ) ಉತ್ತರ ಕನ್ನಡ

   ಈ) ದಕ್ಷಿಣ ಕನ್ನಡ

   ಉತ್ತರ ಕನ್ನಡ

   ಉತ್ತರ ಕನ್ನಡ ಜಿಲ್ಲೆ ಒಟ್ಟಾರೆ ಭೌಗೋಳಿಕ ಪ್ರದೇಶದ ಶೇ 76.12ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಜಿಲ್ಲೆಯಾಗಿದೆ.

www.karunaduexams.com

4. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

ಅ) ರಾಜ್ಯದ ಅರಣ್ಯ ಸಸ್ಯ ವರ್ಗಗಳನ್ನು ಏಳು ವಿಧಗಳಾಗಿ ವಿಂಗಡಿಸಲಾಗಿದೆ

ಆ) ಒಟ್ಟು ಅರಣ್ಯಗಳಲ್ಲಿ ಒಣ ಎಲೆ ಉದುರೆಲೆ ಅರಣ್ಯ ಹೆಚ್ಚಾಗಿ ಕಂಡುಬರುತ್ತದೆ

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಒಂದು ಹೇಳಿಕೆ ಸರಿ

ಎರಡು ಹೇಳಿಕೆ ಸರಿ

5. ರಾಜ್ಯ ಸರ್ಕಾರವು “ಹಸಿರು ಶಾಲಾವನ ಕಾರ್ಯಕ್ರಮ”ವನ್ನುಯಾವ ಹಂತದಲ್ಲಿ ಅನುಷ್ಠಾನಗೊಳಿಸು ?

ಅ) ಗ್ರಾಮ ಮಟ್ಟ

ಆ) ಹೋಬಳಿ ಮಟ್ಟ

ಇ) ತಾಲ್ಲೂಕು ಮಟ್ಟ

ಈ) ಜಿಲ್ಲಾ ಮಟ್ಟ

ತಾಲ್ಲೂಕು ಮಟ್ಟ

ಹಸಿರು ಶಾಲಾವನ ಕಾರ್ಯಕ್ರಮದಲ್ಲಿ 3 ರಿಂದ 5 ಎಕರೆ ಸರ್ಕಾರಿ ಜಾಗ ಹೊಂದಿರುವ ತಾಲ್ಲೂಕಿನ ಒಂದು ಶಾಲೆ/ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಅರಣ್ಯೀಕರಣ ಕೈಗೊಳ್ಳಲಾಗುವುದು.

6. ಕರ್ನಾಟಕ ನೀರಾವರಿ ನಿಗಮದ ಅಧ್ಯಕ್ಷರು ______________?

ಅ) ಮುಖ್ಯಮಂತ್ರಿ

ಆ) ಗೃಹ ಸಚಿವರು

ಇ) ನೀರಾವರಿ ಸಚಿವರು

ಈ) ಸರ್ಕಾರದ ಪ್ರಧಾನ ಕಾರ್ಯದರ್ಶಿ

ಮುಖ್ಯಮಂತ್ರಿ

7. ಈ ಕೆಳಗಿನವುಗಳನ್ನು ಅವುಗಳ ಸ್ಥಾಪನೆಯಾದ ವರ್ಷಗಳ ಸರಿಯಾದ ಕ್ರಮವನ್ನು ಗುರುತಿಸಿ:

I) ಕೃಷ್ಣ ಭಾಗ್ಯ ಜಲ ನಿಗಮ ಲಿಮಿಟೆಡ್

II) ಕರ್ನಾಟಕ ನೀರಾವರಿ ನಿಗಮ ಲಿಮಿಟೆಡ್

III) ಕಾವೇರಿ ನೀರಾವರಿ ನಿಗಮ ಲಿಮಿಟೆಡ್

www.karunaduexams.com

IV) ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಅ) I, II, IV & III

ಆ) I, III, II & IV

ಇ) I, II, III & IV

ಈ) II, IV, III & I

I, II, III & IV

ಕೃಷ್ಣ ಭಾಗ್ಯ ಜಲ ನಿಗಮ ಲಿಮಿಟೆಡ್ (1994), ಕರ್ನಾಟಕ ನೀರಾವರಿ ನಿಗಮ ಲಿಮಿಟೆಡ್ (1998), ಕಾವೇರಿ ನೀರಾವರಿ ನಿಗಮ ಲಿಮಿಟೆಡ್ (2003) ಮತ್ತು ಕಾವೇರಿ ನೀರಾವರಿ ನಿಗಮ ಲಿಮಿಟೆಡ್ (2016).

8. ಸಣ್ಣ ಕೈಗಾರಿಕ ಘಟಕವೆಂದರೆ ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ ರೂ______?

ಅ) ರೂ 25 ಲಕ್ಷಗಳ ವರೆಗೆ

ಆ) ರೂ 25 ಲಕ್ಷಕ್ಕಿಂತ ಮೇಲ್ಪಟ್ಟು ರೂ 5 ಕೋಟಿ ವರೆಗೆ

ಇ) ರೂ 25 ಲಕ್ಷಕ್ಕಿಂತ ಮೇಲ್ಪಟ್ಟು ರೂ 10 ಕೋಟಿ ವರೆಗೆ

ಈ) ರೂ 5 ಕೋಟಿಗಿಂತ ಮೇಲ್ಪಟ್ಟು ರೂ10 ಕೋಟಿ ವರೆಗೆ

ರೂ 25 ಲಕ್ಷಕ್ಕಿಂತ ಮೇಲ್ಪಟ್ಟು ರೂ 5 ಕೋಟಿ ವರೆಗೆ

ಕೈಗಾರಿಕ ಘಟಕಗಳನ್ನು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕ ಘಟಕಗಳು ಎಂದು ಅವುಗಳ ಬಂಡವಾಳ ಹೂಡಿಕೆ ಅನುಗುಣವಾಗಿ ವಿಂಗಡಿಸಬಹುದು. ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ ರೂ 25 ಲಕ್ಷದ ವರೆಗೆ ಇರುವ ಘಟಕವನ್ನು ಅತಿ ಸಣ್ಣ ಕೈಗಾರಿಕ ಘಟಕ ಎನ್ನಲಾಗುತ್ತದೆ. ರೂ 25 ಲಕ್ಷಕ್ಕಿಂತ ಮೇಲ್ಪಟ್ಟು ರೂ 5 ಕೋಟಿ ವರೆಗೆ ಸಣ್ಣ ಮತ್ತು ರೂ 5 ಕೋಟಿಗಿಂತ ಮೇಲ್ಪಟ್ಟು ರೂ10 ಕೋಟಿ ವರೆಗೆ ಮಧ್ಯಮ ಕೈಗಾರಿಕ ಘಟಕ ಎನ್ನಲಾಗುತ್ತದೆ.

9. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಕರ್ನಾಟಕ ಸರ್ಕಾರ ದೇಶದಲ್ಲೆ ಪ್ರಪ್ರಥಮ ಬಾರಿಗೆ ಜವಳಿ ನೀತಿಯನ್ನು ಪ್ರಕಟಿಸಿದೆ

II) ಕರ್ನಾಟಕ ನೂತನ ಜವಳಿ ನೀತಿ 2012-2017 ಆಗಿದೆ

ಮೇಲಿನ ಯಾವ ಹೇಳಿಕೆ ಸರಿಯಾಗಿದೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

www.karunaduexams.com

ಹೇಳಿಕೆ ಒಂದು ಮಾತ್ರ

ಕರ್ನಾಟಕ ನೂತನ ಜವಳಿ ನೀತಿ 2013-2018.

10. ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಗುರುತಿಸಿ:

I) ಮೊಬೈಲ್ ಒನ್ ಸೇವೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ

II) ರಾಜ್ಯ ಸರ್ಕಾರದ ಮೊಬೈಲ್ ಒನ್ ಸೇವೆಗೆ ದುಬೈನಲ್ಲಿ ನಡೆದ ವಿಶ್ವ ಸರ್ಕಾರಗಳ ಶೃಂಗಸಭೆಯಲ್ಲಿ ಅತ್ಯುತ್ತಮ ಎಂ-ಗೌವರ್ನಮೆಂಟ್ ಪ್ರಶಸ್ತಿ ಲಭಿಸಿದೆ

ಮೇಲಿನ ಯಾವ ಹೇಳಿಕೆ/ಹೇಳಿಕೆಗಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

www.karunaduexams.com